# KV BEML NAGAR IN NEWS

### ವಿವಿಧ ಹಂತಗಳಲ್ಲಿ ಶಾಲೆಗೆ ಸೇರುವ ಮಕ್ಕಳ ವಯಸ್ಸು ಪುನರ್ ರಚನೆ: ರುಬಿನಾ

# ಮಕ್ಕಳ ಸಾಮರ್ಥ್ಯ ವೃದ್ಧಿಗೆ ಎನ್‌ಇಪಿ ಸಹಕಾರಿ

**ಕೆಜಿಎಫ್:** ಪ್ರತಿ ವಿದ್ಯಾರ್ಥಿಯ ವಿಶಿಷ್ಟ ಸಾಮರ್ಥ್ಯ ಹೊರತರುವುದು, ಮೌಖಿಕ ಕಲಿಕೆಗಿಂತ ವಿಮರ್ಶಾತ್ಮಕ ಚಿಂತನೆ ಉತ್ತೇಜಿಸಿ ಅಧ್ಯಯನದ ಬದಲು ಕಲಿಕೆಯತ್ತ ಗಮನಹರಿಸುವಂತೆ ಮಾಡುವ ಉದ್ದೇಶದಿಂದ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೊಳಿಸಲಾಗಿದೆ ಎಂದು ಪ್ರಾಂಶುಪಾಲೆ ಡಾ. ರುಬಿನಾ ಹೇಳಿದರು.

ಬೆಮೆಲ್ ನಗರದ ಕೇಂದ್ರೀಯ ವಿದ್ಯಾಲಯದಲ್ಲಿ ಎನ್‌ಇಪಿ 2020 ಅನುಷ್ಠಾನದ 3ನೇ ವರ್ಷದ ಆಚರಣೆ ಪ್ರಯುಕ್ತ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಬಹುಶಿಸ್ತೀಯ ಶಿಕ್ಷಣದ ಮೂಲಕ ಭಾರತವನ್ನು ಜಾಗತಿಕ ಜ್ಞಾನದ ಸೂಪರ್ ಪವರ್ ಆಗಿ ಪರಿವರ್ತಿಸುವುದು ರಾಷ್ಟ್ರೀಯ ಶಿಕ್ಷಣ ನೀತಿಯ ಉದ್ದೇಶವಾಗಿದೆ ಎಂದರು.



ಬೆಮೆಲ್ ನಗರದ ಕೇಂದ್ರೀಯ ವಿದ್ಯಾಲಯದಲ್ಲಿ ಎನ್‌ಇಪಿ 2020 3ನೇ ವಾರ್ಷಿಕೋತ್ಸವದ ಪ್ರಯುಕ್ತ ಹಮ್ಮಿಕೊಳ್ಳಲಾಗಿದ್ದ ಸಭೆಯಲ್ಲಿ ಪ್ರಾಂಶುಪಾಲೆ ಡಾ. ರುಬಿನಾ ಮಾತನಾಡಿದರು.

**ಮಕ್ಕಳ ವಯಸ್ಸು ಪುನರ್ ರಚನೆ:** ಶಿಕ್ಷಣದ ಸ್ವರೂಪ ಮತ್ತು ಪಠ್ಯಕ್ರಮದ ಅಗತ್ಯತೆಗಳ ಆಧಾರದ ಮೇಲೆ ಶಾಲಾ ಶಿಕ್ಷಣದ ಪ್ರವೇಶ ಹಂತಗಳನ್ನು 5+3+3+4 ವಿನ್ಯಾಸಕ್ಕೆ ಪುನರ್ ರಚಿಸುವುದರ ಬಗ್ಗೆ ಎನ್‌ಇಪಿ ತಿಳಿಸುತ್ತದೆ. 2ನೇ ತರಗತಿಯವರೆಗೆ 5 ವರ್ಷಗಳ ಅಡಿಪಾಯದ ಹಂತ, 3 ರಿಂದ 5ನೇ ತರಗತಿಯವರೆಗೆ 3 ವರ್ಷಗಳ ಪೂರ್ವಸಿದ್ಧತಾ ಹಂತ, 6 ರಿಂದ 8ನೇ ತರಗತಿಯವರೆಗೆ 3 ವರ್ಷಗಳ ಮಾಧ್ಯಮಿಕ ಹಂತ ಮತ್ತು 9 ರಿಂದ 12ನೇ ತರಗತಿಯವರೆಗೆ ಸೆಕೆಂಡರಿ ಹಂತ ಎಂದು ವಿವಿಧ ಹಂತಗಳನ್ನಾಗಿ ಶಾಲೆಗೆ ಸೇರುವ ಮಕ್ಕಳ ವಯಸ್ಸನ್ನು ಪುನರ್ ರಚಿಸಲಾಗಿದೆ ಎಂದು ತಿಳಿಸಿದರು.

ಎನ್‌ಇಪಿ 2020ರಲ್ಲಿ ವಿವರಿಸಿರುವಂತೆ 3+, 4+ ಮತ್ತು 5+ ವಯೋಮಾನದ ಮೂರು ಬಾಲವಾಟಿಕಾ ತರಗತಿಗಳ ಒಂದು ವಿಭಾಗವನ್ನು ದೇಶದಾದ್ಯಂತ ಈಗಾಗಲೇ 49 ಕೇಂದ್ರೀಯ ವಿದ್ಯಾಲಯಗಳಲ್ಲಿ ಪ್ರಾಯೋಗಿಕವಾಗಿ ತೆರೆಯಲಾಗಿದ್ದು, 2022-23ನೇ ಸಾಲಿನಲ್ಲಿ 5477 ಮಕ್ಕಳನ್ನು ಎಲ್ಲಾ ಮೂರು ಹಂತದ ಬಾಲವಾಟಿಕಾ ತರಗತಿಗಳಲ್ಲಿ ಸೇರಿಸಿಕೊಳ್ಳಲಾಗಿದೆ ಎಂದರು.

**ಮಕ್ಕಳಿಗೆ ಸಮಗ್ರ ಪಠ್ಯಕ್ರಮ:** ಫೌಂಡೇಶನಲ್ ಹಂತಕ್ಕಾಗಿ ಎನ್‌ಇಪಿ ಚೌಕಟ್ಟನ್ನು 2022ನೇ ಸಾಲಿನ ಅಕ್ಟೋಬರ್ 20 ರಂದು ಜಾರಿಗೊಳಿಸಲಾಗಿದ್ದು, ಭಾರತದಲ್ಲಿ 3 ರಿಂದ 8 ವರ್ಷ ವಯಸ್ಸಿನ ಮಕ್ಕಳಿಗಾಗಿ ಮೊದಲ ಬಾರಿಗೆ ಸಮಗ್ರ ಪಠ್ಯಕ್ರಮದ ಚೌಕಟ್ಟನ್ನು ರೂಪಿಸಿದ್ದು, ಇದು ಎನ್‌ಇಪಿ 2020 ಶಾಲಾ ಶಿಕ್ಷಣಕ್ಕಾಗಿ ಹೊರತಂದಿರುವ ಪಠ್ಯಕ್ರಮ ಮತ್ತು ಶಿಕ್ಷಣದ ನೇರ ಫಲಿತಾಂಶವಾಗಿದೆ. ಇದರ ಆಧಾರದ ಮೇಲೆ ಎನ್‌ಸಿಎಫ್ ಎಫ್‌ಎಸ್ ಆಧಾರಿತ ಜಾದುಯಿ ಪಿಟಾರಾ ಕಲಿಕಾ ಬೋಧನಾ ವಸ್ತುವನ್ನು ಫೆಬ್ರವರಿ 2023ರಂದು ಪ್ರಾರಂಭಿಸಲಾಗಿದ್ದು, ಇದು 3 ರಿಂದ 8 ವರ್ಷ ವಯಸ್ಸಿನ ಮಕ್ಕಳಿಗೆ ಸರಿಹೊಂದಿಸಲಾದ ಆಟ ಆಧಾರಿತ ಕಲಿಕೆಯ ಬೋಧನಾ ವಸ್ತುವಾಗಿದೆ ಎಂದರು.

ಜವಾಹರ್ ನವೋದಯ ವಿದ್ಯಾಲಯ ಶಾಲೆಯ ಪ್ರಾಂಶುಪಾಲ ರಮಾನಾಥನ್, ಬಿವಿಎನ್ ಶಾಲೆಯ ಪ್ರಾಂಶುಪಾಲೆ ಮೇರಿ, ಜೈನ್ ಇಂಟರ್ ನ್ಯಾಶನಲ್ ಶಾಲೆಯ ಪ್ರಾಂಶುಪಾಲೆ ಶೀಲಾ ನಾಯರ್, ಬಿಇಎಂಎಲ್ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲೆ ಸುಧಾ, ಬೆಮೆಲ್ ನರ್ಸರಿ ಶಾಲೆ ಮುಖ್ಯ ಶಿಕ್ಷಕಿ ಜೆನ್ನಿಫರ್, ಶಿಕ್ಷಕ ವಿಕ್ಟರ್, ಬೆಮೆಲ್ ಮಾದರಿ ಶಾಲೆ ಸಿಆರ್‌ಸಿ ಲಕ್ಷ್ಮಣ್, ಸುರೇಶ್ ಮೊದಲಾದವರು ಇದ್ದರು.